## ಪ್ರಾರ್ಥನೆ

# ಶ್ರೀ ಲಕ್ಷ್ಮೀನೃಸಿಂಹ ಪಂಚರತ್ನಸ್ತೋತ್ರದಿಂದ

**ಶುಕ್ತೌ ರಜತಪ್ರತಿಭಾ ಜಾತಾ ಕಟಕಾದ್ಯರ್ಥ ಸಮರ್ಥಾ ಚೇದ್**
**ದುಃಖಮಯೀ ತೇ ಸಂಸೃತಿರೇಷಾ ನಿರ್ವೃತಿದಾನೇ ನಿಪುಣಾ ಸ್ಯಾತ್ ।**
**ಚೇತೋಭೃಂಗ ಭ್ರಮಸಿ ವೃಥಾ ಭವಮರುಭೂಮೌ ವಿರಸಾಯಾಂ**
**ಭಜ ಭಜ ಲಕ್ಷ್ಮೀನರಸಿಂಹಾನಘಪದಸರಸಿಜಮಕರಂದಮ್ ॥೧॥**

ಎಲೈ ಮನಸ್ಸೆಂಬ ದುಂಬಿಯೇ, ಭ್ರಮೆಯಿಂದ ಕಪ್ಪೆಚಿಪ್ಪು ಬೆಳ್ಳಿಯಾಗಿ ತೋರಿದರೆ ಅದರಿಂದ ಬೆಳ್ಳಿಯ ಒಡವೆಗಳನ್ನು ಮಾಡಲು ಸಾಧ್ಯವಾಗುವುದೆ? ಹಾಗೆ ಸಾಧ್ಯವಾದರೆ ದುಃಖಮಯವಾದ ಈ ನಿನ್ನ ಸಂಸಾರವು ಸುಖವನ್ನು ನೀಡುವುದರಲ್ಲಿ ಸಮರ್ಥವಾದೀತು. ಹಾಗಾಗಿ ಮನಸ್ಸೆಂಬ ದುಂಬಿಯೇ! ನಿಸ್ಸಾರವಾದ ಸಂಸಾರವೆಂಬ ಮರುಭೂಮಿಯಲ್ಲಿ ವ್ಯರ್ಥವಾಗಿ ಏಕೆ ಸಂಚರಿಸುತ್ತೀಯೆ! ಶ್ರೀಲಕ್ಷ್ಮೀನರಸಿಂಹನ ಪವಿತ್ರವಾದ ಪಾದ ಕಮಲಗಳಲ್ಲಿರುವ ಮಕರಂದವನ್ನು ಸೇವಿಸು.

**ಆಕೃತಿಸಾಮ್ಯಾಚ್ಛಾಲ್ಮಲಿಕುಸುಮೇ ಸ್ಥಲನಲಿನತ್ವಭ್ರಮಮಕರೋಃ**
**ಗಂಧರಸಾವಿಹ ಕಿಮು ವಿದ್ಯೇತೇ ವಿಫಲಂ ಭ್ರಾಮ್ಯಸಿ ಭೃಶವಿರಸೇಽಸ್ಮಿನ್ ।**
**ಚೇತೋಭೃಂಗ ಭ್ರಮಸಿ ವೃಥಾ ಭವಮರುಭೂಮೌ ವಿರಸಾಯಾಂ**
**ಭಜ ಭಜ ಲಕ್ಷ್ಮೀನರಸಿಂಹಾನಘಪದಸರಸಿಜ ಮಕರಂದಮ್ ॥೨॥**

ಎಲೈ ಚೇತೋಭೃಂಗವೇ! ಆಕಾರದ ಹೋಲಿಕೆಯಿಂದ ಬೂರುಗದ ಹೂವನ್ನು, ನೆಲದಾವರೆಯೆಂದು ಭ್ರಾಂತಿ ಹೊಂದಿದ್ದೀಯೆ. ಇದರಲ್ಲಿ ಸುಗಂಧವಾಗಲೀ, ರಸವಾಗಲೀ ಇವೆಯೆ? ಹಾಗೆಯೇ ನೀರಸವಾದ ಈ ಜಗತ್ತಿನಲ್ಲಿ ಸುಖವಿದೆ ಎಂದು ನಿರರ್ಥಕವಾಗಿ ನೀನು ಭ್ರಮಿಸುತ್ತಿರುವೆ. ಮನಸ್ಸೆಂಬ ದುಂಬಿಯೇ! ಸಾರವಿಲ್ಲದ



ಈ ಸಂಸಾರವೆಂಬ ಮರುಭೂಮಿಯಲ್ಲಿ ವ್ಯರ್ಥವಾಗಿ ಏಕೆ ಸುತ್ತಾಡುತ್ತೀಯೆ? ಶ್ರೀಲಕ್ಷ್ಮೀನರಸಿಂಹನ ಪವಿತ್ರವಾದ ಪಾದ ಕಮಲಗಳಲ್ಲಿರುವ ಮಕರಂದವನ್ನು ಹೀರು.

**ತವ ಹಿತಮೇಕಂ ವಚನಂ ವಕ್ಷ್ಯೇ ಶೃಣು ಸುಖಕಾಮೋ ಯದಿ ಸತತಂ**
**ಸ್ವಪ್ನೇ ದೃಷ್ಟಂ ಸಕಲಂ ಹಿ ಮೃಷಾ ಜಾಗ್ರತಿ ಚ ಸ್ಮರ ತದ್ವದಿತಿ ।**
**ಚೇತೋ ಭೃಂಗ ಭ್ರಮಸಿ ವೃಥಾ ಭವಮರುಭೂಮೌ ವಿರಸಾಯಾಂ**
**ಭಜ ಭಜ ಲಕ್ಷ್ಮೀನರಸಿಂಹಾನಘಪದಸರಸಿಜ ಮಕರಂದಮ್ ॥೩॥**

ಎಲೈ ಮನಸ್ಸೆಂಬ ದುಂಬಿಯೇ! ನಿನಗೆ ಹಿತಕರವಾದ ಮಾತೊಂದನ್ನು ಹೇಳುವೆನು ಕೇಳು. ನೀನು ನಿಜವಾದ ಸುಖವನ್ನು ಬಯಸುವೆಯಾದರೆ ಕನಸಿನಲ್ಲಿ ಕಾಣುವುದೆಲ್ಲಾ ಎಚ್ಚರದಲ್ಲಿ ಹೇಗೆ ಸುಳ್ಳೆಂದು ತಿಳಿಯುವಿಯೋ ಹಾಗೆಯೇ ಎಚ್ಚರದಲ್ಲಿ ಇರುವ ಸುಖವೂ ಸಹ ಸುಳ್ಳೆಂದು ತಿಳಿ. ಮನಸ್ಸೆಂಬ ದುಂಬಿಯೇ! ಈ ಅಸಾರವಾದ ಸಂಸಾರವೆಂಬ ಮರುಭೂಮಿಯಲ್ಲಿ ವ್ಯರ್ಥವಾಗಿ ಏಕೆ ಹಾರಾಡುತ್ತಿದ್ದೀಯೆ? ಶ್ರೀಲಕ್ಷ್ಮೀನರಸಿಂಹನ ಪವಿತ್ರವಾದ ಪಾದಕಮಲಗಳಲ್ಲಿರುವ ಮಕರಂದವನ್ನು ಸೇವಿಸು.

— ಶ್ರೀ ಶಂಕರಾಚಾರ್ಯ

## ಸೂಕ್ತಿಪ್ರಭ

**ಯಾ**ವ ದೇವಿಯು ಸರ್ವಪ್ರಾಣಿಗಳಲ್ಲಿಯೂ ಮಾತೃ ರೂಪದಿಂದ ನೆಲೆಸಿರುವಳೋ ಆ ದೇವಿಗೆ ಪುನಃ ಪುನಃ ನಮಸ್ಕಾರ.

— ಶ್ರೀ ದುರ್ಗಾಸಪ್ತಶತೀ

**ನ**ನ್ನ ಕರುಣೆಯನ್ನು ಪಡೆಯದವನು ನಿಜಕ್ಕೂ ದುರದೃಷ್ಟವಂತ. ನಾನು ಕರುಣೆ ತೋರದ ಯಾವ ವ್ಯಕ್ತಿಯೂ, ಅಷ್ಟೇಕೆ, ಒಂದು ಕೀಟವೂ ಇಲ್ಲ.

— ಶ್ರೀಮಾತೆ ಶಾರದಾದೇವಿ

**ಆ**ದ್ಯಾಶಕ್ತಿಯ ಪೂಜೆಯನ್ನು ಮಾಡಬೇಕು; ಆಕೆಯನ್ನು ಪ್ರಸನ್ನಳನ್ನಾಗಿ ಮಾಡಬೇಕು; ಆಕೆಯೇ ಹೆಂಗಸರ ರೂಪವನ್ನು ಧರಿಸಿಕೊಂಡು ಇದ್ದಾಳೆ. ಅದಕ್ಕಾಗಿಯೇ ನನ್ನದು ಮಾತೃಭಾವ. ಈ ಭಾವ ಬಹಳ ಶುದ್ಧವಾದ ಭಾವ.

— ಶ್ರೀರಾಮಕೃಷ್ಣ

**ಶ**ಕ್ತಿಯ ಅನುಗ್ರಹವಿಲ್ಲದೆ ನಾವು ಏನನ್ನೂ ಸಾಧಿಸಲಾರೆವು. ಸಾತ್ವಿಕ ದೃಷ್ಟಿಯಿಂದ ಪವಿತ್ರಭಾವನೆಗಳಿಂದ ಪೂರಿತರಾಗಿ ಅವಳನ್ನು ಜಗಜ್ಜನನಿ ಎಂದು ಆರಾಧಿಸಿದರೆ ಎಷ್ಟು ಲಾವಣ್ಯಕಾರಿಯಾಗುವುದೆಂದು ಆಲೋಚಿಸಿ ನೋಡಿ. ನನಗೆ ತಾಯಿಯ ಅನುಗ್ರಹ ತಂದೆಯ ಅನುಗ್ರಹಕ್ಕಿಂತ ಲಕ್ಷಪಾಲು ಪವಿತ್ರವಾದುದು.

— ಸ್ವಾಮಿ ವಿವೇಕಾನಂದ

**ಹೇ** ಜನನಿ, ವಿಧಿವಿಲಾಸದಿಂದಲೂ, ನನ್ನ ದಾರಿದ್ರ್ಯದಿಂದಲೂ, ಆಲಸ್ಯದಿಂದಲೂ ಮತ್ತು ನಿನಗೆ ವಿಧೇಯನಾಗಿರಲು ಅಶಕ್ಯನಾದುದರಿಂದಲೂ, ನಿನ್ನ ಅಡಿದಾವರೆಗಳಿಂದ ಚ್ಯುತನಾದೆನು; ಹೇ ಸಕಲೋದ್ಧಾರಿಣಿ, ಹೇ ಶಿವೆ, ನೀನು ನನ್ನ ಸಕಲ ಲೋಪದೋಷಗಳನ್ನೂ ಕ್ಷಮಿಸು; ಲೋಕದಲ್ಲಿ ಕುಪುತ್ರ ಹುಟ್ಟಿದರೂ ಹುಟ್ಟಬಹುದು; ಆದರೆ ಕುಮಾತೆ ಎಲ್ಲಿಯೂ ಕಾಣ ಬರುವುದಿಲ್ಲ.

— ಶ್ರೀ ಶಂಕರಾಚಾರ್ಯ